ಕರ್ನಾಟಕ ಸರ್ಕಾರ

ಕ್ರಮಾಂಕ: ಪಪೂಶಿ/ರಾಸೇಯೋ/ಶುಲ್ಕ/3/2016-17

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು
ದಿನಾಂಕ: 28-8-2016

## ಜ್ಞಾಪನ

ವಿಷಯ:- 2016-17 ನೇ ಸಾಲಿನ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಅಭಿವೃದ್ಧಿಗಾಗಿ ಸಂಪನ್ಮೂಲ ಸಂಗ್ರಹಿಸುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ:ವಾಪ್ರಯು:36-3:ರಾಸೇಯೋ:03
ದಿನಾಂಕ: 08-01-2004
2. ಸಲಹಾ ಸಮಿತಿ ನಡಾವಳ ಅನುಬಂಧ 7/2 ದಿನಾಂಕ 14.07.2016

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಆದೇಶದನ್ವಯ ಹಾಗೂ ಸಲಹಾ ಸಮಿತಿ ನಡಾವಳಿನ್ವಯ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಅಭಿವೃದ್ಧಿಗಾಗಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪ್ರತಿ ವಿದ್ಯಾರ್ಥಿಗಳಿಂದ ಪ್ರವೇಶ ಸಂದರ್ಭದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಪಡೆದ ಶುಲ್ಕ ರೂ. 5/-ನ್ನು ಹಿಂದಿನ ವರ್ಷಗಳಲ್ಲಿ ವಸೂಲಿ ಮಾಡಿರುವ ಎನ್ ಎಸ್ ಎಸ್ ಖಾತೆಯಲ್ಲಿ ಉಳಿದಿರುವ ಶುಲ್ಕದ ಹಣದ ಜೊತೆಗೆ ಸೇರಿಸಿ ಬೇಡಿಕೆ ಹುಂಡಿಯ ಮೂಲಕ **"ನಿರ್ದೇಶಕರು"** ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹೆಸರಿಗೆ ಪಡೆದು, **ಶ್ರೀಮತಿ ಪಿ.ಆರ್.ಗಾಯಿತ್ರಿ ರೆಡ್ಡಿ, ಸಂಯೋಜನಾಧಿಕಾರಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು** ಇವರ ವಿಳಾಸಕ್ಕೆ ಸಂದಾಯವಾಗುವಂತೆ ಕಡ್ಡಾಯವಾಗಿ 31-8-2016 ರ ಒಳಗಾಗಿ ಕಳುಹಿಸಬೇಕು. ಯಾವುದೇ ಕಾರಣಕ್ಕೂ ಎನ್.ಎಸ್.ಎಸ್ ಶುಲ್ಕವನ್ನು ಚಲನ್ ಮುಖಾಂತರ ಕಳುಹಿಸಲು ಅವಕಾಶವಿರುವುದಿಲ್ಲ.

**ನಿರ್ದೇಶಕರ ಪರವಾಗಿ**

**ಜಂಟಿ ನಿರ್ದೇಶಕರು (ಶೈಕ್ಷಣಿಕ)**
**ಪದವಿ ಪೂರ್ವ ಶಿಕ್ಷಣ ಇಲಾಖೆ**

ರಾಜ್ಯದಲ್ಲಿ ಬರುವ ಎಲ್ಲಾ ಸರ್ಕಾರಿ/ ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿಗಳು:-

1. ಸಹಾಯಕ ನಿರ್ದೇಶಕರು ಇ-ಆಡಳಿತ ಪದವಿ ಪೂರ್ವ ಶಿಕ್ಷಣ ಇಲಾಖೆ ಅಂತರ್ಜಾಲದಲ್ಲಿ ಅಳವಡಿಸಲು
2. ಕಛೇರಿ ಪ್ರತಿ